**ಪಾರ್ವತಮ್ಮ ಮುತ್ತುರಾಜು**

# ರಾಜಕುಮಾರ

## ಮಗುವಿನ ಮನಸು, ವರ್ಣಮಯ ಬದುಕು

**ನಿರೂಪಣೆ: ಬಿ.ಎಸ್. ವೆಂಕಟಲಕ್ಷ್ಮಿ**

'ಮಯೂರ'ದ ಅರ್ಧ ಶತಮಾನದ ಸುದೀರ್ಘ ಪಯಣದಲ್ಲಿ ಕನ್ನಡದ ಸಿದ್ಧಪ್ರಸಿದ್ಧರು ಜೊತೆಯಾಗಿದ್ದಾರೆ. ಈ ನವಿಲಿನ ನಡಿಗೆಯಲ್ಲಿ ಕಂಡ ಮೋಹಕ 'ನವಿಲುಗರಿ'ಗಳನ್ನು ಒಂದೊಂದಾಗಿ ಹೆಕ್ಕಿ ಈ ಅಂಕಣ ಓದುಗರ ಮುಂದಿಡುತ್ತ ಬಂದಿದೆ. 1993ರ ಏಪ್ರಿಲ್ ಸಂಚಿಕೆಯಲ್ಲಿ ಪ್ರಕಟವಾಗಿದ್ದ 'ಮಯೂರ'ದ ಜನಪ್ರಿಯ 'ಪತ್ನಿಯರು ಕಂಡಂತೆ ಪ್ರಸಿದ್ಧರು'ವಿನ ಆಯ್ದ ಬರಹ ಇಲ್ಲಿದೆ.

ನಮ್ಮ ಮದುವೆ ಆಗೋ ಹೊತ್ತಿಗೆ ರಾಜಕುಮಾರ್ ಕಂಪನಿ ನಾಟಕಗಳಲ್ಲಿ ಆಗಲೇ ಹೆಸರು ಮಾಡಿದ್ದರೂ ಕೈಯಲ್ಲಿ ಮಾತ್ರ ಕಾಸಿರಲಿಲ್ಲ. ಸುಬ್ಬಯ್ಯ ನಾಯ್ಡು ಅವರ ಹತ್ತಿರ ₹ 500 ಸಾಲ ಇಸ್ಕೊಂಡು ಬಂದಿದ್ದರಂತೆ!

